ಇಂದು ದಿಃ**25-04-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್.ಕೆ.ವಿ ವಕೀಲರಿಂದ ವಾದಿಗಳ ಪರಃ**

ನನ್ನ ಸೋದರ ಮಾವ ಈ ದಾವೆಯನ್ನು ಪಾಲು ಕೇಳಿ ಮಾಡಿದ್ದಾನೆ ಎಂದರೆ ಸರಿ. ನನ್ನ ತಾಯಿ ಶಿವಮ್ಮ ತೀರಿಕೊಂಡಿರುವ ಕಾರಣ, ನಮ್ಮನ್ನು ಪಕ್ಷಗಾರ ಎಂದು ಮಾಡಿದ್ದಾರೆ ಎಂದರೆ ಸರಿ. ವಾದಪತ್ರದಲ್ಲಿ ಏನೇನು ತಿಳಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಕರಾರಿನಲ್ಲಿ ಏನು ವಿಷಯ ತಿಳಿಸಿದ್ದೇನೆ ಎಂದು ಮಾಹಿತಿ ಇದೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ನಾನು ನನ್ನ ತಮ್ಮ ಪ್ರತಿವಾದಿ ನಂಬರ್-3(ಬಿ) ಪರವಾಗಿಯೂ ಸಾಕ್ಷಿ ಹೇಳುತ್ತಿದ್ದೇನೆ ಎಂದು ತಿಳಿಸಿದ್ದೇನೆ. ನಾನು ಪ್ರತಿವಾದಿ 2, 3, 3(ಬಿ)ದಿಂದ 5(ಬಿ) ರವರ ಪರವಾಗಿಯೂ ಸಾಕ್ಷಿ ಹೇಳುತ್ತಿದ್ದೇನೆ. ಅವರ ಪರವಾಗಿಯೂ ಸಾಕ್ಷಿ ಹೇಳುತ್ತಿರುವ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೇನೆ. ಈ ಕುರಿತು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. 1, 2, 4(ಎ) ದಿಂದ 5(ಬಿ) ಪ್ರತಿವಾದಿಯರು ಆರೋಗ್ಯವಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಹೇಳಲು ಸಮರ್ಥ ಇದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿ ಈಕೆ ನನ್ನ ದೊಡ್ಡಮ್ಮ ಗದಿಗೆಮ್ಮ ಇವಳ ಮಗಳು ಎಂದರೆ ಸರಿ. 2 ನೇ ಪ್ರತಿವಾದಿ ಈಕೆ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ನಾವು ಮತ್ತು 1 ಮತ್ತು 2 ನೇ ಪ್ರತಿವಾದಿಯರು ಬಹಳ ವಿಶ್ವಾಸಿಕರು ಎಂದರೆ ಸರಿಯಲ್ಲ. ಪ್ರತಿವಾದಿ 4(ಡಿ) ಭಾನುಹಳ್ಳಿಯಲ್ಲಿ ವಾಸ ಇದ್ದಾರೆ. ಪ್ರತಿವಾದಿ 4(ಎ) ದಿಂದ (ಸಿ) ಶಿಬಾರ ಗ್ರಾಮದಲ್ಲಿ ವಾಸ ಇದ್ದಾರೆ.

ನಾನು ವಾದಿ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನಾನು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ತೋರಿಸಲು ನಾನು

ದಾಖಲೆ ಹಾಜರುಪಡಿಸಿದ್ದೇನೆ. ವಾದಿಯ ತಂದೆಯ ಕುಟುಂಬದಲ್ಲಿ ಪಿತ್ರಾರ್ಜಿತ ಆಸ್ತಿಗಳ ಹಂಚಿಕೆ ಆದ ಬಗ್ಗೆ ತೋರಿಸಲು ಏನಾದರೂ ನೊಂದಾಯಿತ ಪಾಲು ವಿಭಾಗ ಪತ್ರ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದು ಹೇಳುತ್ತಾರೆ. ನಾನು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ತೋರಿಸಲು ಖರೀದಿ ಪತ್ರ ಹಾಕಿದ್ದೇನೆ. ಸಾಕ್ಷಿಗೆ ಅವರು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಿ, ಯಾವ ದಾಖಲೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎಂದು ಹೇಳುತ್ತಾರೆ. ನಾನು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಡಿ.ಬಸಪ್ಪ ಈತನ ಗಂಡುವ ಮಕ್ಕಳ ನಡುವೆ ಪಾಲುವಿಭಾಗ ಆದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾನು ಹಾಜರುಪಡಿಸಿರುವ ವಂಶವೃಕ್ಷಕ್ಕೂ ಮತ್ತು ವಾದಿ ತನ್ನ ವಾದಪತ್ರದಲ್ಲಿ ತಿಳಿಸಿದ ವಂಶವೃಕ್ಷಕ್ಕೂ ವ್ಯತ್ಯಾಸ ಇದೆ. ವಾದಪತ್ರದಲ್ಲಿ ವಾದಿ ತಿಳಿಸಿದ ವಂಶವೃಕ್ಷದಲ್ಲಿ ಡಿ.ಬಸಪ್ಪ ಈತನ ಮಕ್ಕಳು, ಗದಿಗೆಮ್ಮ, ಬಸವಲಿಂಗಪ್ಪ, ಬಸವರಾಜಪ್ಪ, ಶಿವಮ್ಮ, ಶಿವಪ್ಪ ಮತ್ತು ಕಬೇಂದ್ರಪ್ಪ ಎಂದು ಕಾಣಿಸಿದ್ದಾರೆ ಎಂದರೆ ಸಾಕ್ಷಿ ಮಕ್ಕಳು ಬದುಕಿಲ್ಲ ಎಂದು ಹೇಳುತ್ತಾರೆ. ಗದಿಗೆಮ್ಮ ತೀರಿಕೊಂಡಿದ್ದಾಳೆ ಎಂದರೆ ಸರಿ. ಆಕೆಯ ಗಂಡ ಬಸಪ್ಪ ಸಹ ತೀರಿಕೊಂಡಿದ್ದಾನೆ ಎಂದರೆ ಸರಿ. 2 ನೇ ಪ್ರತಿವಾದಿ ಗದಿಗೆಮ್ಮ ಇವಳ ಮಗಳು ಎಂದರೆ ಸರಿ. 2 ನೇ ಪ್ರತಿವಾದಿ ಹೊರತುಪಡಿಸಿ, ಗದಿಗೆಮ್ಮ ಇವಳಿಗೆ ಬೇರೆ ಮಕ್ಕಳು ಇಲ್ಲ ಎಂದರೆ ಸರಿ. ಬಸವಲಿಂಗಪ್ಪ ಮತ್ತು ಆತನ ಹೆಂಡತಿ ನಿಂಗಮ್ಮ ತೀರಿಕೊಂಡಿದ್ದಾರೆ ಎಂದರೆ ಸರಿ. 4(ಬಿ)ದಿಂದ 4(ಡಿ) ಅವರ ಮಕ್ಕಳು ಎಂದರೆ ಸರಿ. ಇವರನ್ನು ಹೊರತುಪಡಿಸಿ ಬಸವಲಿಂಗಪ್ಪನಿಗೆ ಬೇರೆ ವಾರಸುದಾರರು ಇಲ್ಲ. 1 ನೇ ಪ್ರತಿವಾದಿ ಬದುಕಿದ್ದಾರೆ ಎಂದರೆ ಸರಿ. ನನ್ನ ತಾಯಿ ಶಿವಮ್ಮ ತೀರಿಕೊಂಡಿದ್ದಾರೆ ಎಂದರೆ ಸರಿ.

ನಾವು ಅವರ ವಾರಸುದಾರರು ಎಂದರೆ ಸರಿ. ಕುಬೇಂದ್ರಪ್ಪ ತೀರಿಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿ 5(ಎ) ಮತ್ತು 5(ಬಿ) ಕುಬೇಂದ್ರಪ್ಪನ ವಾರಸುದಾರರು ಎಂದರೆ ಸರಿ. ಜ್ಯೋತಿ ಇವಳು ಮದುವೆಯಾಗದೇ ತೀರಿಕೊಂಡಿದ್ದಾಳೆ ಎಂದರೆ ಸರಿ.

ಡಿ.ಬಸಪ್ಪನ ಮಕ್ಕಳು ಬೇರೆಯಾದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ವಾದಿ ಅಸುಂಡಿಗ್ರಾಮದಲ್ಲಿ ವಾಸ ಇರುವ ಬಗ್ಗೆ ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ವಾದಿ ಹುಟ್ಟಿದ್ದಾಗಿನಿಂದ ಭಾನುಹಳ್ಳಿ ವಾಸ ಇದ್ದಾನೆ ಎಂದರೆ ಸರಿಯಲ್ಲ. ವಾದಿ ರೂ.20 ಸಾವಿರ ಪಡೆದು, ತನ್ನ ಹಕ್ಕನ್ನು ಬಿಟ್ಟುಕೊಟ್ಟ ಬಗ್ಗೆ ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ಇಲ್ಲ ಎಂದು ಹೇಳುತ್ತಾರೆ. ವಾದಿ ರೂ.20 ಸಾವಿರ ಪಡೆದಿಲ್ಲ ಮತ್ತು ತನ್ನ ಹಕ್ಕನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಈಗ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಮತ್ತು ಗದಿಗೆಮ್ಮ ಇವರ ಮದುವೆ ಬಹಳ ವರ್ಷಗಳ ಹಿಂದೆ ಆಗಿರುತ್ತದೆ ಎಂದರೆ ಸರಿ. ಅವರ ಮದುವೆಗಳನ್ನು ಸಾಕಷ್ಟು ಬಂಗಾರ ಮತ್ತು ಹಣಕೊಟ್ಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳಲ್ಲಿ ನನ್ನ ತಾಯಿಗೆ ಮತ್ತು ಗದಿಗೆಮ್ಮ ಇವಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮರಿಬಸಪ್ಪ, ಬಸಪ್ಪ ಮತ್ತು ಕೊಟ್ರಪ್ಪ ಬೇರೆ ಬೇರೆ ವಾಸ ಇದ್ದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಮರಿಬಸಪ್ಪ, ಬಸಪ್ಪ ಮತ್ತು ಕೊಟ್ರಪ್ಪ ಜೀವಂತ ಇದ್ದಾಗ ನಾನು ಹುಟ್ಟಿರುತ್ತೇನೆ. ಕೊಟ್ರಪ್ಪ ಮತ್ತು ಮರಿಬಸಪ್ಪ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ಆಗ ನಾನು ಇನ್ನೂ ಸಣ್ಣವನು ಇದ್ದೇನು. ಮರಿಬಸಪ್ಪ, ಬಸಪ್ಪ ಮತ್ತು ಕೊಟ್ರಪ್ಪ ಯಾವತ್ತಿಗೂ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಅವರು ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ

ಸರಿಯಲ್ಲ. ಈ ಮೂರು ಜನ ಬೇರೆ ಬೇರೆ ವಾಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಲಕ್ಕಶೆಟ್ಟಿ ಗ್ರಾಮದ ಸರ್ವೆ ನಂಬರ್ 18 ಮತ್ತು ಇನಾಮು ಜಮೀನುಗಳನ್ನು ಈ ಮೂರು ಜನ ಹಂಚಿಕೊಂಡ ಬಗ್ಗೆ ತಿಳಿಸಿದ್ದು, ಈ ಕುರಿತು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಚಂದ್ರಶೇಖರ ಎನ್ನುವವರಿಗೆ ಮಾರಿದ್ದಾರೆ ಎಂದು ಹೇಳುತ್ತಾರೆ. ಚಂದ್ರಶೇಖರಪ್ಪ ಈತನಿಗೆ ಮಾರಿದ ಬಗ್ಗೆ ಖರೀದಿ ಪತ್ರ ಹಾಜರುಪಡಿಸಿಲ್ಲ. ಖರೀದಿ ಪತ್ರ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಮೂಲ ದಾಖಲೆ ಸಿಕ್ಕಿಲ್ಲ ಆದರೆ ಖರೀದಿದಾರರು ಇನ್ನೂ ಬದುಕಿದ್ದಾರೆ ಎಂದು ಹೇಳುತ್ತಾರೆ. ಮರಿಬಸಪ್ಪ ವ್ಯವಸಾಯ ಸೇವಾ ಸಂಘದಲ್ಲಿ ವಿವಿಧ ಹುದ್ದೆಗಳಲ್ಲಿಇದ್ದ ಬಗ್ಗೆ ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ವ್ಯವಸಾಯ ಸೇವಾ ಸಂಘ ಇನ್ನೂ ಭಾನುಹಳ್ಳಿಯಲ್ಲಿ ಇದೆ ಎಂದರೆ ಸರಿ. ಮರಿಬಸಪ್ಪ ಅಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ತೋರಿಸಲು ದಾಖಲೆ ಪಡೆದು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಮರಿಬಸಪ್ಪ ಇವನಿಗೆ ಎಷ್ಟು ಸಂಬಳ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆತನಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಬಹುದು ಎಂದರೆ ಸಾಕ್ಷಿ 40 ವರ್ಷಗಳ ಹಿಂದೆ ಆತ ಸೆಕ್ರೆಟರಿ ಆಗಿದ್ದನು ಎಂದು ಹೇಳುತ್ತಾರೆ. ಸಹಕಾರ ಸಂಘದಲ್ಲಿ ರೇಕಾರ್ಡ್ ಗಳು ಸಿಗುತ್ತಿಲ್ಲ. ನಾನು ಮರಿಬಸಪ್ಪ ಕೆಲಸ ಮಾಡುತ್ತಿದ್ದಬಗ್ಗೆ ದಾಖಲೆ ನೀಡಲು ಸಹಕಾರ ಸಂಘಕ್ಕೆ ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಮರಿಬಸಪ್ಪ ಸೊಸೈಟಿಗೆ ಸಕ್ಕರೆ ಪೂರೈಕೆ ಆದಾಗ ಅದರ ವಿತರಣೆಗೆ ಕೆಲಸಕ್ಕೆ ಇದ್ದನು ಎಂದರೆ ಸರಿಯಲ್ಲ. ಆತನಿಗೆ ಯಾವುದೇ ಸಂಬಳ ಇರಲಿಲ್ಲ ಎಂದರೆ ಸರಿಯಲ್ಲ. ಮರಿಬಸಪ್ಪ ಮದುವೆ ಆಗಿರಲಿಲ್ಲ ಎಂದರೆ ಸರಿ. ಮರಿಬಸಪ್ಪ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ

ಸರಿಯಲ್ಲ.

**ವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.